ಶ್ರೀ ಅಭಯಚಂದ್ರ ಜೈನ್ ಅವರು ಮುಖ್ಯ ಸಚೇತಕರು. ಮತ್ತೆ ಇನ್ನೊಂದು ಪ್ರಕಟಣೆ ಇದೆ.

ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿರುತ್ತದೆ, ಒಂದು, 2008ನೇ ಸಾಲಿನ ಕರ್ನಾಟಕ ಧನವಿನಿಯೋಗ ಸಂಖ್ಯೆ:1 ವಿಧೇಯಕ, 2008 ನೇ ಸಾಲಿನ ಕರ್ನಾಟಕದ ಧನವಿನಿಯೋಗ ವಿಧೇಯಕ 2008ನೇ ಸಾಲಿನ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ವಿಧೇಯಕ, 2008ನೇ ಸಾಲಿನ ಕರ್ನಾಟಕ ಕಾನೂನು[ತಿದ್ದುಪಡಿ] ವಿಧೇಯಕ, 2008ನೇ ಸಾಲಿನ ಕರ್ನಾಟಕ ಮೋಟಾರು ವಾಹನಗಳ ತೆರಿಗೆ [ತಿದ್ದುಪಡಿ] ವಿಧೇಯಕ, ಹಾಗು 2008ನೇ ಸಾಲಿನ ಕರ್ನಾಟಕ ಸ್ಟ್ಯಾಂಪ್ಸ್[ತಿದ್ದುಪಡಿ] ವಿಧೇಯಕಗಳಿಗೆ ವಿಧಾನಪರಿಷತ್ತು ಯಾವುದೇ ತಿದ್ದುಪಡಿಗಳಿಲ್ಲದೆ ತನ್ನ ಸಹಮತವನ್ನು ನೀಡಿರುವುದು ಎಂದು ತಿಳಿಸಿರುತ್ತಾರೆ.

[ಗೊಂದಲ]

ಈಗಾಗಲೇ ತಾವು ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಬಗ್ಗೆ ತಾವೇನು ಧರಣಿಯನ್ನು ಕುಳಿತ್ತಿದ್ದಿರಿ, ಈ ವಿಷಯದ ಬಗ್ಗೆ ನಾನು ತಮ್ಮಲ್ಲಿ ಈಗಾಗಲೇ ವಿನಂತಿ ಮಾಡಿಕೊಂಡಿದ್ದೆನೆ. ಈ ವಿಷಯ ಚರ್ಚೆಯಾಗಿದೆ, ತಾವು ಮತ್ತು ಉದಾಸಿಯವರನ್ನು ಮತ್ತೊಮ್ಮೆ ಕರೆಯಿಸಿ ಹೇಳಿದ್ದೇನೆ, ಚರ್ಚೆಯಾಗಿದೆ ಅವರು ಉತ್ತರವನ್ನು ಕೊಟ್ಟಿದ್ದಾರೆ. ಅದಕ್ಕೆ ತಾವು ದಯವಿಟ್ಟು ತಮ್ಮ ಸ್ಥಾನಕ್ಕೆ ಹೋದರೆ ಗಮನ ಸೆಳೆಯುವ ಸೂಚನೆ ಮತ್ತು ಇನ್ನಿತರ ವಿಷಯಗಳನ್ನು ತೆಗೆದುಕೊಳ್ಳಬಹುದು, ಉಳಿದ ವಿಷಯಗಳನ್ನು ತೆಗೆದುಕೊಳ್ಳಲು ನಾನು ತಯಾರಿದ್ದೇನೆ, ಧರಣಿಯನ್ನು ಮುಕ್ತಾಯ ಮಾಡಿ, ದಯವಿಟ್ಟು ತಮ್ಮ ಸ್ಥಾನಕ್ಕೆ ಹೋಗಿ ಎಂದು ನಾನು ಮತ್ತೊಮ್ಮೆ ತಮ್ಮಲ್ಲಿ ವಿನಂತಿ ಮಾಡಿಕೊಳ್ಳಿತ್ತೇನೆ.

[ಈ ಸಂದರ್ಭದಲ್ಲಿ ಮಾನ್ಯ ಜೆಡಿ[ಎಸ್]ನಾಯಕರಾದ ಶ್ರೀ ಕುಮಾರಸ್ವಾಮಿಯವರು ತಮ್ಮ ಆಸನಕ್ಕೆ ತೆರಳಿದರು]

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡುವಾಗ ಅನುಮಾನಾಸ್ಪದವಾಗಿದೆ ಎಂಬ ಪದವನ್ನು ಈ ಒಂದು ವಿಷಯದಲ್ಲಿ 10-12 ಸಾರಿ ಉಪಯೋಗ ಮಾಡಿದ್ದಾರೆ. ಆದುದರಿಂದ ಅವರು ಅನುಮಾನವಿದೆ ಎಂದು ಅವರೇನು ಹೇಳುತ್ತಿದ್ದಾರೆ, ಆ ದೃಷ್ಟಿಯಿಂದಲೆ ನಾವು ಸದನ ಸಮಿತಿ ಮಾಡಿ ಎಂದು ಹೇಳುತ್ತಿದ್ದೇವೆ. ಅವರು ಪದೇ ಪದೇ ಅನುಮಾನ ಎಂಬುವ ಪದವನ್ನು ಹೇಳಿದ್ದಾರೆ.

[ಗೊಂದಲ]